ಸಾರಿಯಾದರೂ ಥಿಯೇಟರ್‌ಗಳ inspection ಮಾಡಿ ಸರ್ಕಾರಕ್ಕೆ report ಕೊಡಬೇಕೆಂದು ನಾನು ಡಿ.ಸಿ. ಗಳಿಗೆ ಇವತ್ತೇ ಆದೇಶ ನೀಡುತ್ತೇನೆ. ನನ್ನ ಗಮನಕ್ಕೆ ತಂದಂತಹ ಸಮಸ್ಯೆಗಳನ್ನು ನಿವಾರಿಸಲು ನಾನು ಚಿಂತನೆ ಮಾಡುತ್ತೇನೆ. ಇದಕ್ಕಿಂತ ಹೆಚ್ಚಿನ ಉತ್ತರವನ್ನು ನಾನು ಈಗ ಕೊಡುವುದಕ್ಕಾಗುವುದಿಲ್ಲ. ಇವತ್ತು 4.30 ಗಂಟೆಗೆ ಮೀಟಿಂಗ್ ಕರೆದಿದ್ದೇನೆ. ಆ ಮೀಟಿಂಗ್ ಆದ ಮೇಲೆ ಆ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುತ್ತೇನೆ. ಆ ಸಭೆಗೆ ಎಲ್ಲರೂ ಬಂದು ಭಾಗವಹಿಸಿದರೆ ನಮ್ಮ ಸರ್ಕಾರಕ್ಕೆ ಡಿಸ್ಕಷನ್‌ನಲ್ಲಿ ಅನುಕೂಲವಾಗುತ್ತದೆ, ಆದ್ದರಿಂದ ಸದರಿ ಸಭೆಯಲ್ಲಿ ಭಾಗವಹಿಸಬೇಕೆಂದು ನಾನು ಎಲ್ಲರನ್ನೂ ಕೋರುತ್ತೇನೆ. ನಾವು ಇದುವರೆಗೂ ಯಾವ ತರಹದ ಡಿಸಿಷನ್ ಅನ್ನೂ ಸಹ ಈ ದಿಸೆಯಲ್ಲಿ ತೆಗೆದುಕೊಂಡಿಲ್ಲ. We have kept our mind open. ಸಭೆಯಲ್ಲಿ ಏನು ತೀರ್ಮಾನವಾಗುತ್ತದೋ ಎಂದು ನೋಡೋಣ. ಒಟ್ಟಾರೆಯಾಗಿ ಈ ಉದ್ಯಮ ಸಂಕಷ್ಟಕ್ಕೆ ಸಿಲುಕಬಾರದು. ಇವತ್ತು ಸಾವಿರಾರು ಕಾರ್ಮಿಕರು ಈ ಉದ್ಯಮದಲ್ಲಿ ಇದ್ದಾರೆ. Indirect ಆಗಿ ಲಕ್ಷಾಂತರ ಜನ ಸಿನಿಮಾ Producers, Directors, Cameramen, Technicians ಎಲ್ಲಾ ಇದ್ದಾರೆ. ಅವರಿಗೆಲ್ಲಾ ಈಗ ನಷ್ಟವಾಗಿದೆ. ಆ ಚಿಂತನೆಯಿಂದ ನಾನು ಇವತ್ತು ಈ ಮೀಟಿಂಗ್ ಅನ್ನು ಕರೆದಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. 4.30 ಗಂಟೆಯ ಮೀಟಿಂಗ್ ಆದ ನಂತರ, ಅದರ ಫಲಶ್ರುತಿಯನ್ನು ನಾನು ಸದನಕ್ಕೆ ತಿಳಿಸುತ್ತೇನೆ.

1.00 ಪಿ.ಎಂ.

(iii) ವಿಷಯ:– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ವೃಷ್ಟಿಯಿಂದ ಹಾನಿಯಾದವರ ಕುಟುಂಬಗಳಿಗೆ ಪರಿಹಾರ ಒದಗಿಸುವ ಬಗ್ಗೆ:–

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):– ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಆ್ಯವರೇಜ್ 25 ರಿಂದ 30 ಮಿಲಿ ಮೀಟರ್ ಮಳೆ ಪ್ರತಿ ದಿವಸ ಬರುತ್ತದೆ. ಆದರೆ 21 ಮತ್ತು 22ನೇ ಜೂನ್ 196 ಮಿಲಿ ಮೀಟರ್, ಮತ್ತು 22ನೇ ತಾರೀಖು 301 ಮಿಲಿ ಮೀಟರ್ ಮಳೆ ಬಂದಿದೆ. ಈ ತರಹ ಧಾರಾಕಾರವಾಗಿ ಬಂದಿರುವ ಮಳೆ ಅತಿವೃಷ್ಟಿಯಿಂದ ಏಳು ಜನ ಸತ್ತು ಹೋಗಿದ್ದಾರೆ. ಈ ಅವಘಡದಲ್ಲಿ ಮನೆ ಕುಸಿತ, ಕಟ್ಟಡ ಕುಸಿತ ಮತ್ತು ಬೇರೆ ಬೇರೆ ಕಾರಣಗಳಿಂದ ಏಳು ಜನ ಅಸುನೀಗಿದ್ದಾರೆ. ಅವರ ಕುಟುಂಬಕ್ಕೆ ಪರಿಹಾರ ಕೊಡಬೇಕಾಗಿದೆ. ಹಾನಿಯಾದ ವಾಸದ ಮನೆಗಳು 417, ಹಾನಿಯಾದ ರಸ್ತೆಗಳು 127 ಗಾಯಗೊಂಡವರು ಆರು ಜನ, ಹಾನಿಯಾದ ಕಟ್ಟಡಗಳು 25, ಕೃಷಿ ಹಾನಿ 212.25 ಹೆಕ್ಟೇರುಗಳಷ್ಟು. ಮಂಗಳೂರು ಮಹಾನಗರ ಪಾಲಿಕೆಗೆ ಆದ ನಷ್ಟ 1.36 ಲಕ್ಷ ರೂಪಾಯಿ. ಇಡೀ ದಕ್ಷಿಣ ಕನ್ನಡದಲ್ಲಿ ಆಗಿರುವಂತಹ ನಷ್ಟ ಎಂಟು ಕೋಟಿ 27.43 ಲಕ್ಷ ಸಾವಿರ ರೂಪಾಯಿಗಳು ಇಷ್ಟು ಭೀಕರ ದುರಂತವಾಗಿದ್ದರೂ ಕೂಡ ನಮ್ಮ ಜಿಲ್ಲೆಗೆ ರಾಜ್ಯ ಸರ್ಕಾರ ಕೊಟ್ಟಿರುವುದು ಕೇವಲ 20 ಲಕ್ಷ ಮತ್ತು ಇವತ್ತು ಕಳೆದ ವರ್ಷ ನಮ್ಮ ಎಲ್ಲ ಶಾಸಕರೂ ಸುಮಾರು ಜಿಲ್ಲೆಯ 10 ಶಾಸಕರ ಕಡೆಯಿಂದ 10 ಲಕ್ಷ ರೂ. ಮಾತ್ರ ಕೊಟ್ಟು 30 ಲಕ್ಷ ರೂಪಾಯಿ ಬರಕ್ಕೋಸ್ಕರ ಕಡಿತ ಮಾಡಿದ್ದೀರಿ. ಆದರೆ ನಮಗೆ ಆ ಹಣವನ್ನೂ ಕೊಟ್ಟಲ್ಲಿ ಮೂರು ಕೋಟಿ ರೂಪಾಯಿ ಲಭ್ಯವಾಗಬೇಕು. ಆ ಹಣವೂ ಸಿಕ್ಕಿಲ್ಲ. ಯಾವ ಪರಿಹಾರ ನಮಗೆ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುವುದು ತಕ್ಷಣ ನಾಲ್ಕು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಉಳಿದ ನಾಲ್ಕು ಕೋಟಿ ರೂ. ಗಳನ್ನು ಕನಿಷ್ಠ 15 ದಿವಸಗಳೊಳಗಾಗಿ ಬಿಡುಗಡೆ ಮಾಡಬೇಕು. ತುರ್ತಾಗಿ ನಾಲ್ಕು ಕೋಟಿ ರೂಪಾಯಿ ಬಿಡುಗಡೆ

ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲಾ ಸಚಿವರು ಏಕೆ ಮೌನದಲ್ಲಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಕೇಳುತ್ತೇನೆ. ರಾಜ್ಯ ಸರ್ಕಾರದಲ್ಲಿ ಮುಖ್ಯ ಮಂತ್ರಿಗಳಿಗೂ ಕೂಡ ಈ ವೇದಿಕೆ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇದನ್ನು ಗಂಭೀರವಾಗಿ ತೆಗೆದುಕೊಂಡು ತಕ್ಷಣ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

(iv) ವಿಷಯ:– ಬಳ್ಳಾರಿ ನಗರದ ಬೀದಿಯಲ್ಲಿ ಪ್ರಾಧಿಕಾರದವರು ತೋಡಿರುವಂಥ ಗುಂಡಿಯಲ್ಲಿ ಬಿದ್ದು ಇಬ್ಬರು ಮಕ್ಕಳು ಅಸುನೀಗಿರುವುದರ ಬಗ್ಗೆ

ಶ್ರೀ ಸಿ. ಭೈರೇಗೌಡ (ವೇಮಗಲ್):– ಮಾನ್ಯ ಅಧ್ಯಕ್ಷರೆ, ಇವತ್ತಿನ ಸರ್ವೇ ಸಾಮಾನ್ಯವಾದ ಎಲ್ಲಾ ಪತ್ರಿಕೆಗಳಲ್ಲಿ ಮುಖ ಪುಟದಲ್ಲಿ ಒಂದು ಎಲ್ಲರೂ ಸಂತೋಷಪಡಬಹುದಾದ ಸುದ್ದಿಯನ್ನು ಪ್ರಕಟಣೆ ಮಾಡಿದ್ದಾರೆ. ಅದೇ ಬೆನ್ನ ಹಿಂದೆ ನಾವೆಲ್ಲರೂ ಕೂಡ ಅತ್ಯಂತ ದುಃಖಮಯವಾಗಿ ದುಃಖ ಉಂಟು ಮಾಡತಕ್ಕಂತಹ ಸಂಗತಿಯನ್ನು ಪ್ರಕಟಣೆ ಮಾಡಿದ್ದಾರೆ. "ಸಂಯುಕ್ತ ಕರ್ನಾಟಕ" ಪತ್ರಿಕೆಯಲ್ಲಿ ಮಾನ್ಯ ಮಂತ್ರಿಗಳಾದ ಅಲ್ಲಂವೀರಭದ್ರಪ್ಪನವರು ಆಸ್ಪತ್ರೆಗೆ ಹೋಗಿ ಪಾಕಿಸ್ತಾನದಿಂದ ಬಂದಿರತಕ್ಕಂತಹ ತಂದೆ ತಾಯಿಗಳ ಮಧ್ಯದಲ್ಲಿ ನಿಂತು ನೂರ್‌ಫಾತಿಮಾ ಎನ್ನುವ ಮಗುವಿಗೆ ಹಾರೈಸಿ ಬಂದಿದ್ದೀರಿ. ಮನುಷ್ಯ ಪ್ರಯತ್ನದಿಂದ ಸಾವಿನ ದವಡೆಯಲ್ಲಿ ಇದ್ದಂಥ ಮಗುವನ್ನು ವಾಪಸ್ ತಂದಿರತಕ್ಕಂತಹ ಮಹತ್ ಕಾರ್ಯವನ್ನು ವೈದ್ಯರು ಮಾಡಿದ್ದಾರೆ. ತಾವೂ ಕೂಡ ಅಲ್ಲಿ ಹೋಗಿ ಸಂತೋಷ ವ್ಯಕ್ತಪಡಿಸಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಅವರಿಗೆ ಹಣ ಸಹಾಯ ಮಾಡತಕ್ಕಂಥದ್ದು as a token of gesture ಮಾಡಿರತಕ್ಕಂಥದ್ದನ್ನು ಕೇಳಿ ನಾವು ಸಂತೋಷಪಡಬೇಕಾಗುತ್ತದೆ. ಆದರೆ ಅದೇ ಬೆನ್ನಲ್ಲಿ ಸಂಯುಕ್ತ ಕರ್ನಾಟಕದ ಮುಖ ಪುಟದಲ್ಲಿ ಅತ್ಯಂತ ದುಃಖದಾಯಕವಾದ 8 ಚಿತ್ರವನ್ನು ಕೂಡ ಪ್ರಕಟಿಸಿದ್ದಾರೆ. ಇಬ್ಬರು ಮಕ್ಕಳು ಅಸುನೀಗಿದ್ದಾರೆ. ಒಂದು ಉಳಿಸಿರತಕ್ಕಂತಹ ಪ್ರಯತ್ನ ಆದರೆ, ಇನ್ನೊಂದು ನಮ್ಮ ಆಡಳಿತ ಯಂತ್ರ ಮತ್ತು ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಇಬ್ಬರು ಮಕ್ಕಳು ಅಸುನೀಗಿರತಕ್ಕಂಥ ಹೃದಯ ವಿದ್ರಾವಕ ದೃಷ್ಯವನ್ನು ಕೂಡ ಪ್ರಕಟಣೆ ಮಾಡಿದ್ದಾರೆ. ಬಹಳ ದುಃಖಕರವಾದ ವಿಚಾರವೇನೆಂದರೆ, ಈ ಇಬ್ಬರು ಮಕ್ಕಳಿಗೂ ತಂದೆಗಳಿಲ್ಲ. ಇಬ್ಬರು ಮಕ್ಕಳೂ ಅಕ್ಕತಂಗಿಯರ ಮಕ್ಕಳು. ಇವರಿಬ್ಬರೂ ಮಕ್ಕಳೂ ಆಟ ಆಡತಕ್ಕಂತಹವರು. ಸ್ವಭಾವಿಕವಾಗಿ ಮಕ್ಕಳು ಹಾದಿಬೀದಿಯಲ್ಲಿ ಆಟ ಆಡುತ್ತಿರುತ್ತಾರೆ. ನಮ್ಮಲ್ಲಿ ಪ್ರತ್ಯೇಕವಾದ ಆಟದ ಮೈದಾನಗಳು ಇಲ್ಲ. ಬಡವರ್ಗದಿಂದ ಬಂದಿರತಕ್ಕಂತಹ ಮಕ್ಕಳು ಇವರು ಅಲ್ಲಿ ಹೋಗಿ ಬಳ್ಳಾರಿ ನಗರದಲ್ಲಿ ಅವರದೇ ಆದ ಜಿಲ್ಲೆ, ಅವರ ಹುಟ್ಟೂರು ಆ ಹುಟ್ಟೂರಿನಲ್ಲಿ ಇಬ್ಬರೂ ಮಕ್ಕಳು ಹೋಗಿ ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದವರು ತೋಡಿರತಕ್ಕಂತಹ ಗುಂಡಿಯಲ್ಲಿ ಬಿದ್ದು ಸತ್ತಿರತಕ್ಕಂತಹ ಹೃದಯ ವಿದ್ರಾಹಕ ದೃಷ್ಯವನ್ನು ಪತ್ರಿಕೆಗಳು ನಮ್ಮ ಮುಂದೆ ಇಟ್ಟಿವೆ. ಒಂದು ಕಡೆ ವೈದ್ಯರಿಗೆ ಧನ್ಯವಾದಗಳನ್ನು ಅರ್ಪಿಸೋಣ, ಮತ್ತೊಂದು ಕಡೆ ಗುಂಡಿ ತೋರಿ ನಿರ್ಲಕ್ಷ್ಯತೆ ತೋರಿದ ಅಧಿಕಾರಿಗಳು ಮತ್ತು ಪ್ರಾಧಿಕಾರದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ, ಈ ಇಬ್ಬರೂ ಮಕ್ಕಳ ಕೊಲೆ, ಈ ಅಧಿಕಾರಿಗಳು ಮಾಡಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಈ ಸದನದ ಮೂಲಕ ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳತಕ್ಕಂಥದ್ದು ಏನೆಂದರೆ, ಯಾರು ಸಂಬಂಧಪಟ್ಟ ಅಧಿಕಾರಿಗಳಿದ್ದಾರೆ ಅವರ ಮೇಲೆ ಕೊಲೆ ಮೊಕದ್ದಮೆ ನೊಂದಾಯಿಸಬೇಕು. ಅವರು ಇವತ್ತಿನ ದಿವಸ ಕೊಲೆಗಾರರಾಗಿದ್ದಾರೆ. ಈ ಕೊಲೆಗಾರರ ಮೇಲೆ ಕೊಲೆ ಮೊದಕ್ಕಮೆ ನೋಂದಾಯಿಸಿ ಅವರನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ನಿಲ್ಲಿಸಿ ಅವರನ್ನು ಜೈಲಿಗೆ ಕಳುಹಿಸತಕ್ಕಂತಹ